

■ **ರಂಜನಿ ರಾಘವನ್**
ಕಲರ್ಸ್ ಕನ್ನಡ ವಾಹಿನಿಯ 'ಕನ್ನಡತಿ' ಧಾರಾವಾಹಿ ಖ್ಯಾತಿ ಯ ನಟಿ ಹಾಗೂ ಸಿನಿಮಾ ಕಲಾವಿದೆ

ಕಲಿತಿದ್ದೇವೆ ಎಂದೆನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಮನೆಮಂದಿಯ ಜೊತೆ ಇದ್ದುದೇ ತುಂಬ ಕಡಿಮೆಯಾಗಿತ್ತು. ತುಂಬ ವರ್ಷಗಳಿಂದ ಹೀಗೆ ಇರಲು ನನಗೆ ಸಾಧ್ಯವೇ ಆಗಿರಲಿಲ್ಲ. ಕಾಲೇಜು–ಚಿತ್ರೀಕರಣ ಎಂದು ನನ್ನ ಸಮಯದ ಹೆಚ್ಚಿನ ಪಾಲು ಖರ್ಚಾಗುತ್ತಿತ್ತು. ಕುಟುಂಬದ ಜೊತೆ ಬೆರೆತು ಸಮಯ ಕಳೆಯಲು ಒಂದು ಅವಕಾಶವೂ ಕೊರೊನಾ ತಂದುಕೊಟ್ಟಿತು. ಅದರಿಂದಾಗಿ ಸಣ್ಣಪುಟ್ಟ ಖುಷಿಯ ಬೆಲೆ ಅನುಭವಕ್ಕೆ ಬಂತು. ಸಣ್ಣ ಸಣ್ಣ ವಿಚಾರಗಳನ್ನು ತಿಳಿಯಲು ಸಂಕಷ್ಟದ ಸಂಕೀರ್ಣ ದಿನಗಳನ್ನು ಬಳಸಿಕೊಂಡಿದ್ದೇನೆ. ಮುಂದಿನ ದಿನಗಳ ಬದುಕು ಹೇಗಿರಬೇಕು ಎನ್ನುವುದನ್ನು ಇದು ಕಲಿಸಿದೆ ಎಂದು ಭಾವಿಸಿದ್ದೇನೆ.

ಸಂಕಷ್ಟದಲ್ಲಿ ನಿಂತು 2021ರ ಹೊಸ ವರ್ಷದ ಬಾಗಿಲನ್ನು ದೊಡ್ಡ ಮಟ್ಟದ ನಿರೀಕ್ಷೆ ಹೊತ್ತು ಬಡಿಯುತ್ತಿದ್ದೇನೆ. ಸಮಾಜದ ಎಲ್ಲ ಕ್ಷೇತ್ರಗಳು ಆರ್ದ್ರವಾದ ಸ್ಥಿತಿ ತಲುಪಿವೆ. ಈಗ ಅವೆಲ್ಲ ಚೇತರಿಸಿಕೊಂಡು ಅಭಿವೃದ್ಧಿ ಹೊಂದುತ್ತವೆ ಎಂದುಕೊಂಡಿದ್ದೇನೆ. ಕೊರೊನಾ ನಿಯಂತ್ರಣಕ್ಕೆ ಲಸಿಕೆ ಭರವಸೆಯ ಬೆಳಕಾಗಿ ಬರುತ್ತದೆ. ಸಮಾಜ–ಮಾರುಕಟ್ಟೆಯಲ್ಲಿ ನವೋಲ್ಲಾಸ ಮಿಡಿಯುತ್ತದೆ. ಜನಜೀವನ ಸಹಜಸ್ಥಿತಿಗೆ ಬರುತ್ತದೆ. ಬಯಸಿದ ಸಿನಿಮಾ ನೋಡಬೇಕು, ಇಷ್ಟದ ವಸ್ತು–ಉಪಕರಣ ಖರೀದಿಸಬೇಕು, ಸುತ್ತಾಡಿ ಖುಷಿಯನ್ನು ಅನುಭವಿಸಬೇಕು – ಇಂಥ ಬಯಕೆಗಳು ನನಗಷ್ಟೇ ಅಲ್ಲ, ಎಲ್ಲ ವರ್ಗದ ಜನರಿಗೂ ಇದೆ. ಅವರ ಆಸೆಗಳೆಲ್ಲವೂ 2021ರಲ್ಲಿ ಈಡೇರಿದರೆ ಎಲ್ಲ ವಲಯಗಳೂ ಮೊದಲಿನಂತೆ ಚೇತರಿಸಿಕೊಳ್ಳುತ್ತವೆ. ಬದುಕೆಂಬ ಬಂಡಿಯ ಗಾಲಿಗಳು ಕೊರೊನಾ ಪೂರ್ವದ ದಿನಗಳ ಹಳಿಯಲ್ಲಿ ಓಡುವಂತಾಗಲಿ. ಕಳೆದುಕೊಂಡಿದ್ದೆಲ್ಲವನ್ನೂ ನಾವು ಪಡೆದುಕೊಳ್ಳುತ್ತೇವೆ ಎನ್ನುವ ಭರವಸೆ ಇದೆ. ಇದಕ್ಕೆ ನನಗೆ ಸಿಕ್ಕಿರುವ ಅವಕಾಶಗಳೇ ಉದಾಹರಣೆ ಆಗಬಲ್ಲವು.

ಸಹಜ ದಿನಮಾನದಲ್ಲೂ ಕೆಲವೊಂದು ಎಚ್ಚರಿಕೆಯನ್ನು ನಾವು ತೆಗೆದುಕೊಳ್ಳಬೇಕು. ಕೊರೊನಾ ಎರಡನೇ ಅಲೆಯ ಭೀತಿಯ ಬಿರುಗಾಳಿ ಬೀಸುತ್ತಿದೆ. ಅದರ ತಡೆಗೆ ಮಾಸ್ಕ್

# ಆರೋಗ್ಯಭಾಗ್ಯದ ಹಂಬಲ

ನಮ್ಮಲ್ಲಿ ಹಲವರಿಗೆ ಈ ಅಭ್ಯಾಸವಿದೆ: ವರ್ಷದ ಆರಂಭವೋ, ಹುಟ್ಟಿದ ದಿನವೋ ಬಂದಾಗ ಅಜೆಂಡಾಗಳನ್ನು ಹಾಕಿಕೊಂಡು ಈ ವರ್ಷದಲ್ಲಿ ಇತಿಂಥ ಕೆಲಸಗಳನ್ನು ಮಾಡಬೇಕು ಎಂದು ಒಂದು ಪಟ್ಟಿ ತಯಾರಿಸಿಕೊಳ್ಳುವುದು. ಅದು ತೂಕ ಇಳಿಸುವುದಾಗಿರಬಹುದು, ಡ್ರಿಂಕ್ಸ್ ಅಥವಾ ಸಿಗರೇಟು ಬಿಡುವುದಿರಬಹುದು, ಮದುವೆಯಿರಬಹುದು, ಮನೆ–ಸೈಟು ಕೊಳ್ಳುವುದಿರಬಹುದು, ಪರೀಕ್ಷೆ ಪಾಸು ಮಾಡುವುದು, ಇರುವ ಉದ್ಯೋಗ ಬದಲಾಯಿಸುವುದು, ಪುಸ್ತಕ ಬರೆಯುವುದು, ಸಿನಿಮಾ ಮಾಡುವುದು, ಹೀಗೆ... ಇದೆಲ್ಲದರ ಜೊತೆಗೆ ಕಳೆದ ವರ್ಷದ ಪಟ್ಟಿಯಲ್ಲಿ ಬಾಕಿ ಉಳಿದ ಕೆಲಸಗಳನ್ನೂ ಇದರೊಟ್ಟಿಗೆ ಸೇರಿಸಿಕೊಂಡು ಪೂರೈಸುವ ಚಾಲೆಂಜ್!

ನಾವು ಲಾಗಾಯ್ತಿನಿಂದ ಕೇಳುತ್ತಿರುವ ಕ್ಲೀಷೆಯ ಮಾತುಗಳು ಎಂಬ ಒಂದು ಪಟ್ಟಿ ಮಾಡುವುದಾದರೆ 'ಆರೋಗ್ಯವೇ ಭಾಗ್ಯ' ಎಂಬ ವಾಕ್ಯವೂ ಅದರಲ್ಲಿ ಖಂಡಿತ ಸ್ಥಾನ ಪಡೆದುಕೊಳ್ಳುತ್ತದೆ. ಆದರೆ ಒಂದು ಮಾತನ್ನು ನಾವು ಮರೆಯಬಾರದು. ಇಂತಹ ಹಲವು ನುಡಿಗಟ್ಟುಗಳು ಬಳಕೆಯಲ್ಲಿ ಸವಕಲಾಗಿದ್ದರೂ ತನ್ನೊಳಗೆ ಹುದುಗಿಸಿಕೊಂಡಿರುವ ಸತ್ವದಲ್ಲಿ ಕೊಂಚವೂ ಮುಕ್ಕಾಗಿಲ್ಲ. 'ಆರೋಗ್ಯವೇ ಭಾಗ್ಯ' ವಾಕ್ಯಕ್ಕೆ ಸೋದಾಹರಣ ಸಾಕ್ಷಿ ಕಳೆದ ವರ್ಷ ನಮ್ಮನ್ನೆಲ್ಲ ಕಾಡಿದ ಕೊರೊನಾ.

**ದುರಿತ ಕಾಲದಲ್ಲಿ ಯಾವುದೇ ಕನಸು ಬೇಡವೆಂದರೂ, ಕಿಟ್ಟೆಲ್ ಅವರ ಜೀವನಸಾಧನೆ ಕುರಿತ ಕನಸೊಂದು ಕಾಡುತ್ತಿದೆ.**



■ **ಪಿ. ಶೇಷಾದ್ರಿ**
ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾಗಳ ನಿರ್ದೇಶಕರು

2020ರ ಜನವರಿ 1ರಂದು ಎಲ್ಲರ ಹಾಗೆ ನಾನೂ ಆ ವರ್ಷ ಮಾಡಬೇಕಾದ ಕೆಲಸಗಳ ಪಟ್ಟಿಮಾಡಿಕೊಂಡಿದ್ದೆ. ಅದಾಗಿ ಮೂರೇ ತಿಂಗಳಲ್ಲಿ ಕೊರೊನಾ ಬಂದು ಎಲ್ಲ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿತು. ಹಾಗೆಂದು ಸಂಪೂರ್ಣವಾಗಿ ಕೊರೊನಾ ವೈರಸ್ ಅನ್ನು ದೂಷಿಸುವುದಿಲ್ಲ. ಯಾಕೆಂದರೆ ಹಲವು ವರ್ಷಗಳಿಂದ ನನ್ನ ಪಟ್ಟಿಯಲ್ಲಿ ಬಾಕಿಯಿದ್ದ ಹಲವು ಕೆಲಸಗಳನ್ನು ಲಾಕ್‌ಡೌನ್ ಸಮಯದಲ್ಲಿ ಮಾಡಿಕೊಳ್ಳಲು ಇದು ನೆರವಾಯಿತು. ಆ ಬಾಕಿ ಕೆಲಸಗಳೆಂದರೆ – ಪುಸ್ತಕಗಳನ್ನು ಓದುವುದು ಮತ್ತು ಸಿನಿಮಾ ನೋಡುವುದು. ಇದರ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳುವುದು. ಪುಸ್ತಕಗಳನ್ನು ಓದುತ್ತಾ, ಸಿನಿಮಾಗಳನ್ನು ನೋಡುತ್ತಾ ಹೋದಂತೆ ಅರಿವಾದ ಒಂದು ಸತ್ಯ, ಈ ಹಿಂದೆ ಎಷ್ಟೊಂದನ್ನು ಕಳೆದುಕೊಂಡಿದ್ದೆ ಎನ್ನುವುದು. ಇನ್ನು ಮುಂದೆ ಏನೂ ಮಾಡಬಾರದು, ಸುಮ್ಮನೇ ಓದುತ್ತಾ ನೋಡುತ್ತಾ ಕೇಳುತ್ತಾ ಇದ್ದುಬಿಡಬೇಕು ಎಂದು ಅನ್ನಿಸಿದ್ದು ಸುಳ್ಳಲ್ಲ.

ಈಗ 2021 ಹೊಸವರ್ಷ ಬಂದಿದೆ. ಮೈ ಕೊಡವಿಕೊಳ್ಳಬೇಕು. ಹೊಸ ಪಟ್ಟಿ, ಹೊಸ ಆಲೋಚನೆಗೆ ದಾರಿಮಾಡಿಕೊಳ್ಳಬೇಕು. ಕೊರೊನಾ ಉತ್ತರಾರ್ಧದಲ್ಲಿ ಹಿಂದಿನ ಪಟ್ಟಿಗಳಿಗಿಂತ ಮುಂದಿನದು ಭಿನ್ನವಾಗಿರಬೇಕು. ವಿಭಿನ್ನ ಅಂದರೆ ಯಾವುದು? ಹಿಂದೆಯೇ ಉದ್ಭವಿಸುವ ಪ್ರಶ್ನೆ. ಉತ್ತರವಿಲ್ಲ. ಆಗ

**ನಿಮ್ಮ ಕನಸುಗಳನ್ನು ರೂಪಿಸಿಕೊಳ್ಳಲು ದೊರೆತ ಹೊಸ ಅವಕಾಶ ಎನ್ನುವ ಕೃತಜ್ಞತೆಯೊಂದಿಗೆ ಹೊಸ ವರ್ಷವನ್ನು ಎದುರುಗೊಳ್ಳಿ.**
**-ಅವಿನಾ ಸೆಲೆಸ್ಟೆ**